


### ಬೆಚ್ಚಿಬೀಳಿಸುವ ದೌರ್ಜನ್ಯ

'ಸುಧಾ' ಜ.31ರ ಮುಖಪುಟ ಲೇಖನ 'ಈ ದೌರ್ಜನ್ಯಕ್ಕೆ ಕೊನೆ ಎಂದು?', 'ನ್ಯಾಯಕ್ಕೆ ಎಷ್ಟೊಂದು ಮುಖಗಳು' ಸುಚೇತನಾ ನಾಯ್ಕ ಹಾಗೂ ಭಾನು ಮುಷ್ತಾಕ್ ಅವರ ಲೇಖನಗಳನ್ನು ಓದಿ ಬೆಚ್ಚಿಬೀಳುವಂತಾಯಿತು.

ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎ.ಪಿ.ರಂಗನಾಥ್, ಬಿ.ಎಸ್.ಸತೀಶ್, ಮೈಸೂರು/ ರಾಜಶೇಖರ ಹಾದಿಮನಿ, ಧಾರವಾಡ/ ಬಿ.ಎನ್.ಸೊಲ್ಲಾಪುರೆ, ಕಮಲನಗರ

### ಶ್ರೀರಾಮನ ಮೇಲೆ ಕೋಪ ಯಾಕೆ?

ಶಿಕಾಕು ಅವರು 'ಒಳ್ಳೆಯತನ'ದ ಬಗ್ಗೆ ಚಿಂತನಶೀಲ ವಿಚಾರ ಲಹರಿ ಹರಿಸುತ್ತಲೇ ಕೆಲವು ಸಂದೇಹಕ್ಕೂ ಕಾರಣವಾಗಿದ್ದಾರೆ. 'ಶ್ರೀರಾಮನು ಹೇಡಿಯಂತೆ ಮರದ ಮರೆಯಲ್ಲಿ ನಿಂತು ವಾಲಿಯನ್ನು ಸಂಹಾರ ಮಾಡುತ್ತಾನೆ' ಎಂದು ಬರೆದಿದ್ದಾರೆ.

ಇದೇ ಪ್ರಶ್ನೆಯನ್ನು ವಾಲಿ ಕೇಳಿದಾಗ, ಶ್ರೀರಾಮ ಕೊಟ್ಟ ಉತ್ತರ ಚಂಪೂ ರಾಮಾಯಣದಲ್ಲಿ ಹೀಗೆ ಉಲ್ಲೇಖಿತಗೊಂಡಿದೆ: ಆಗ ಇಡೀ ಭರತ ಖಂಡಕ್ಕೆ (ಭರತ ಖಂಡ ಎಂಬ ಹೆಸರು ನಂತರ ಬಂದಿದ್ದು– ಇರಲಿ) ಅಯೋಧ್ಯೆಯ ರಾಜನೇ ಅರಸ. ವಾಲಿಯು ತಮ್ಮನ ಪತ್ನಿಯನ್ನು ಬಲವಂತವಾಗಿ ಅಪಹರಿಸಿ, ವಿವಾಹವಾದದ್ದು ತಪ್ಪು.

ವಾಲಿಗೆ ಒಂದು 'ವರ' ಇದೆ. ಅವನ ಎದುರು ಯಾರೇ ಬಂದು ನಿಂತರೂ, (ಯುದ್ಧಕ್ಕೆ) ಅವರ ಅರ್ಧ 'ಬಲ' ವಾಲಿಗೆ ವರ್ಗಾವಣೆ ಆಗುತ್ತಿತ್ತು. ಹೀಗಾಗಿ ಶ್ರೀರಾಮ ಮರೆಯಲ್ಲಿ ನಿಂತು ಬಾಣ ಬಿಡಬೇಕಾಯಿತು.

ಚೆನ್ನಾಗಿ ಬರೆಯುವ ಶಿಕಾಕು ಈ ಮಧ್ಯೆ ಯಾಕೋ ಶ್ರೀರಾಮನ ಮೇಲೆ ಸಿಡಿಮಿಡಿ ಮಾಡ್ತಾನೇ ಇದ್ದಾರೆ– ಕಾರಣ ಗೊತ್ತಿಲ್ಲ!

-ಬಳ್ಳಾರಿ ಮಧ್ವರಾಜ್, ಬೆಂಗಳೂರು

### ಮಲೆನಾಡಿನಲ್ಲೂ ಕೊರ್ಲೆ

'ಬರಗಾಲದ ಅನ್ನ: ಕೊರ್ಲೆ' ಡಾ.ಮಲ್ಲಿಕಾರ್ಜುನ ಕುಂಬಾರರ ಲೇಖನ ಓದಿದಾಗ ಜನವರಿಯಿಂದ ಮೇ ವರೆಗೆ ಗದ್ದೆಗಳನ್ನು ಹಾಳುಬಿಡುವ ಮಲೆನಾಡಿನ ಜನರೂ ಸಹ ಈ ವಿಧಾನ ಅನುಸರಿಸಿ, ಈ ಬಿಡುವಿನ ಅವಧಿಯಲ್ಲಿ ಕೊರ್ಲೆ ಬೆಳೆಯಬಹುದು ಎನಿಸಿತು.

-ಹೇ.ಕ.ಮಂ.ಮಧ್ಯಸ್ಥ, ಘಲ್ಗುಣಿ

### ಭೀತಿ ನಿವಾರಿಸಿದ ಬರಹ

ಚಿಕನ್‌ಪಾಕ್ಸ್ ಕುರಿತು ನಮಗೆ ಭೀತಿ ಇರಬೇಕಾಗಿಲ್ಲ ಎಂಬುದನ್ನು ವೈಜ್ಞಾನಿಕ ಆಧಾರದ ಮೇಲೆ ಡಾ.ವಿನಯ ಶ್ರೀನಿವಾಸ್ ನಿರೂಪಿಸಿದ್ದಾರೆ.

ಎಸ್.ನಿತ್ಯ, ಮೂಡಬಿದಿರೆ

### ಕಣ್ಣೀರು ಹರಿಸಿದ ಕಥೆ

ಡಾ. ಅನುರಾಧ ಕಟ್ಟೆಯವರ 'ಮಲ್ಲಿಗೆ ಸಾಹೇಬ' ಕಥೆ ನಿಜ ಜೀವನಕ್ಕೆ ಹತ್ತಿರವೆನಿಸಿತು. ಕಾಲ ಮೀರಿದ ಮೇಲೆ ಎಚ್ಚೆತ್ತುಕೊಳ್ಳದ ನಮ್ಮ ಸ್ವಭಾವಕ್ಕೆ ಹಿಡಿದ ಕನ್ನಡಿಯಂತಿದೆ. ಕಥೆಯ ಕೊನೆಯ ವಾಕ್ಯಗಳನ್ನು ಓದಿದಾಗ ಕಣ್ಣೀರು ತುಂಬಿ ಬಂದಿತು.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಅಚ್ಚರಿಯ ಸಾಧನೆ

ವಂಡರ್ ಪುಟದಲ್ಲಿ ವಿದ್ಯಾ ವಿ. ಹಾಲಭಾವಿ ಅವರ ಚಿತ್ರ ಬರಹ ಅವಳಿ ಶಿಶುಗಳ ಜಲಸಾಹಸ ಓದಿ ನಿಜಕ್ಕೂ ಅಚ್ಚರಿಯಾಯ್ತು.

-ಕಾಳೀಹುಂಡಿ ಶಿವಕುಮಾರ್, ಮೈಸೂರು

### ಹೇರ್ ಸ್ಟೈಲ್, ಮೂಗು!

'ನೀವು ಕೇಳಿದಿರಿ?'ಯಲ್ಲಿ 'ಸೋನಿಯಾ ಗಾಂಧಿಗೂ, ಇಂದಿರಾ ಗಾಂಧಿಗೂ ಏನು ವ್ಯತ್ಯಾಸ?' ಎಂಬ ಪ್ರಶ್ನೆಗೆ, ರಾಮು ಅವರು ನೀಡಿರುವ ಉತ್ತರ 'ಹೇರ್ ಸ್ಟೈಲ್, ಮೂಗು!' ಸೂಪರ್. ವ್ಯಂಗ್ಯಚಿತ್ರ ಇನ್ನೂ ಸೂಪರ್!

-ಪಿ.ಜೆ. ರಾಘವೇಂದ್ರ, ಮೈಸೂರು

